ಹೆಸರು ಕೇಳಿಯೇ ಹೆದರಿಹೋದ ಇವರು ಇನ್ನು ಒಂದು ಕೋಟಿ ರಾಕ್ಷಸರನ್ನು ಹೇಗಾದರೂ ಕೊಲ್ಲುತ್ತಾರೆ?" ಹೀಗೆ ಆಲೋಚಿಸಿದ ವಿಶ್ವಾಮಿತ್ರರಿಗೆ, ದರಶಥನು ರಾಮನನ್ನು ಕಳಿಸದೆ ಭರತನನ್ನು ತನ್ನೊಂದಿಗೆ ಕಳುಹಿಸಿರುವುದು ತಿಳಿದುಬಂತು. ರಾಜನು ತನ್ನನ್ನು ಅಪಹಾಸ್ಯ ಮಾಡಿರುವನೆಂದು ಪರಿಗಣಿಸಿ, ಮುನಿಯು ಅತ್ಯಂತ ಕೋಪದಿಂದ ಅಯೋಧ್ಯೆಗೆ ಹಿಂತಿರುಗುತ್ತಾರೆ. ಅವರ ಕಣ್ಣಿನಿಂದ ಹೊರಟ ಅಗ್ನಿಯು ಅಯೋಧ್ಯೆಯನ್ನು ಸುಡಲು ಆರಂಭಿಸಿತು. ಎಲ್ಲ ನಾಗರಿಕರೂ ಹಾಹಾಕಾರ ಮಾಡುತ್ತ ರಾಮನ ಬಳಿ ಓಡಿಹೋದರು. ರಾಮನ ಮುಂದೆ, ಈ ವಿಪತ್ತಿಗೆ ದಶರಥನೇ ಕಾರಣನೆಂದು ಹೇಳಿ, ಮುನಿಗೆ ಮೋಸ ಮಾಡಿ ಭರತನನ್ನು ಕಳುಹಿಸಿದ ಸಂಗತಿಯನ್ನು ಒಪ್ಪಿಸಿದರು. ತಮ್ಮನ್ನು ಈ ಸಂಕಟದಿಂದ ಪಾರು ಮಾಡಬೇಕೆಂದು ಬೇಡಿಕೊಂಡರು. ರಾಮನು ದಶರಥನ ಬಳಿಗೆ ಹೋಗಿ ಸ್ಥಿತಿಯನ್ನು ನಿವೇದಿಸಿ ಕೊಂಡಾಗ, ದಶರಥನು ರಾಮನನ್ನು ವಿಶ್ವಾಮಿತ್ರ ಋಷಿಗಳ ಜೊತೆಗೆ ಕಳುಹಿಸಿಕೊಡುತ್ತಾನೆ.

### ರಾಮನ ಏಕಾಂತ ಭಕ್ತಿ

ಲಂಕಾಕಾಂಡದಲ್ಲಿ ಬರುವ ಒಂದು ಪ್ರಸಂಗ. ರಾವಣನು ದುರ್ಗಾದೇವಿಯನ್ನು ಪೂಜಿಸಿ ತನ್ನ ವಶದಲ್ಲಿಟ್ಟುಕೊಂಡದ್ದನ್ನು ಕಂಡ ಬ್ರಹ್ಮನು, ಅಕಾಲದಲ್ಲಿ ದೇವಿಯನ್ನು ಜಾಗೃತಗೊಳಿಸಿ ಆರಾಧಿಸಲು ರಾಮನಿಗೆ ಸಲಹೆ ನೀಡುತ್ತಾನೆ. ಹನುಮಂತನು ದೇವಿಯ ಪೂಜೆಗಾಗಿ ನೂರೆಂಟು ಕಮಲದ ಹೂವುಗಳನ್ನು ದೇವೀದಹ ಎಂಬ ಉದ್ಯಾನವನದಿಂದ ತರುತ್ತಾನೆ. ಅದೇರೀತಿ ರಾಮನು, ದೇವಿಯನ್ನು ಸ್ತುತಿಸಿ ಪೂಜಿಸುತ್ತಾನೆ. ದೇವಿಗೆ ನೂರೆಂಟು ನೀಲಕಮಲದ ಹೂವುಗಳನ್ನು ಅರ್ಪಿಸುವೆನೆಂದು ರಾಮನು ಸಂಕಲ್ಪಿಸಿದ್ದರಿಂದ, ದೇವಿಯು ಅವನ ಭಕ್ತಿಯನ್ನು ಪರೀಕ್ಷಿಸಲು ಅವುಗಳಲ್ಲಿ ಒಂದು ಹೂವನ್ನು ಕಾಣದಾಗಿ ಮಾಡಿಬಿಡುತ್ತಾಳೆ. ವ್ಯಾಕುಲನಾಗಿ ರಾಮನು ಹೂವಿಗಾಗಿ ಹನುಮಂತನನ್ನು ಕೇಳಲು, ದೇವೀದಹದಲ್ಲಿ ಇದ್ದದ್ದು ಕೇವಲ ನೂರೆಂಟೇ ಹೂವುಗಳೆಂದೂ, ದೇವಿಯೇ ಒಂದು ಹೂವನ್ನು ಅಪಹರಿಸಿದ್ದಾಳೆಂದೂ ಹೇಳುತ್ತಾನೆ. ರಾಮನು ಅತ್ಯಂತ ದೀನನಾಗಿ ದೇವಿಯನ್ನು ಪ್ರಾರ್ಥಿಸುತ್ತಾನೆ. ಆದರೂ ಆಕೆ ಇನ್ನಷ್ಟು ಪರೀಕ್ಷೆ ಮಾಡುವ ಉದ್ದೇಶದಿಂದ ದರ್ಶನ ನೀಡದಾದಾಗ, ರಾಮನು ತನ್ನ ಕಷ್ಟಗಳನ್ನು ಜೋರಾಗಿ ಹೇಳಿಕೊಳ್ಳುತ್ತ ಸಾಮಾನ್ಯ ವ್ಯಕ್ತಿಯಂತೆ ಅಳುತ್ತಾನೆ. ಅವನು ಅಳುವುದನ್ನು ನೋಡಿದ ಲಕ್ಷ್ಮಣ, ಹನುಮಂತ ಮೊದಲಾದ ಎಲ್ಲರೂ ಅಳಲು ಆರಂಭಿಸುತ್ತಾರೆ.

ಅಷ್ಟರಲ್ಲಿ ರಾಮನಿಗೊಂದು ಉಪಾಯ ಹೊಳೆಯುತ್ತದೆ. ಲೋಕವು ತನ್ನನ್ನು 'ನೀಲಕಮಲಾಕ್ಷ' ಎಂದು ಕರೆಯುತ್ತದೆ. ತನ್ನ ಸಂಕಲ್ಪವನ್ನು ಪೂರ್ತಿ ಮಾಡಲು ತನ್ನ ಕಣ್ಣನ್ನೇ ಏಕೆ ಕಿತ್ತು ಅರ್ಪಿಸಬಾರದೆಂದು ಚಿಂತಿಸಿ, ಹರಿತವಾದ ಬಾಣವೊಂದರಿಂದ ತನ್ನ ಸುಂದರವಾದ ಕಣ್ಣನ್ನು ಕೀಳಲು ಮುಂದಾಗುತ್ತಾನೆ. ಕೂಡಲೇ ದೇವಿಯು ಕರುಣೆಯಿಂದ ಕೂಡಿ, ಧಾವಿಸಿ ಬಂದು ಹಾಗೆ ಮಾಡದಂತೆ ಅವನನ್ನು ತಡೆಯುತ್ತಾಳೆ. ರಾವಣನನ್ನು ತಾನು ತ್ಯಜಿಸಿಹೋಗುವುದಾಗಿಯೂ ರಾಮನು ಆತನನ್ನು ನಾಶಮಾಡಬಹುದೆಂದೂ ಆಶ್ವಾಸನೆ ನೀಡುತ್ತಾಳೆ.

ಹೀಗೆ, ಕೃತ್ತಿವಾಸನು ಇಂತಹ ಅನೇಕ ಪ್ರಸಂಗಗಳಿಂದ ತನ್ನ ಕೃತಿಯನ್ನು ರಸಪೂರ್ಣವಾಗಿ ಮಾಡಿದ್ದಾನೆ. ಇದನ್ನು ಸವಿದಷ್ಟೂ ಮನಸ್ಸಿಗೆ ಆನಂದವಾಗುವುದರ ಜೊತೆಗೆ ಭಗವದ್ಭಕ್ತಿಯೂ ಬೆಳೆಯುತ್ತದೆ. ●

## ಸ್ನೇಹಪ್ರಭ

**ಹಿಂದಿನ ಕಾಲದ ಮೌಲ್ಯಗಳನ್ನು ಧಾರ್ಮಿಕ ವ್ಯಕ್ತಿಗಳು ಸಮಾಜದ ಮೇಲೆ ಹೇರುತ್ತಿದ್ದಾರೆ ಅನ್ನಿಸುತ್ತದೆ. ಅವು ಪ್ರಾಯೋಗಿಕವೇ? ಮೌಲ್ಯಗಳು ಕಾಲಕ್ಕೆ ಅನುಸಾರವಾಗಿ ಮಾರ್ಪಡುತ್ತವೆಯಲ್ಲವೇ? ಅಂತಹ ಪ್ರಾಸಂಗಿಕ ಮೌಲ್ಯಗಳನ್ನು ಮಾತ್ರವೇ ಜನರಿಗೆ ಬೋಧಿಸಬೇಕಲ್ಲವೇ?**

ಎಲ್ಲ ಮೌಲ್ಯಗಳು ತಾತ್ಕಾಲಿಕವಲ್ಲ, ಅನೇಕ ಸಾರ್ವಕಾಲಿಕ ಮೌಲ್ಯಗಳೂ ಇವೆ. ವಿವಿಧ ಧಾರ್ಮಿಕ ಸಂಪ್ರದಾಯಗಳು, ಸಾಮಾಜಿಕ ನೀತಿ ನಿಯಮಗಳು, ಪ್ರಾದೇಶಿಕವಾದ ಬಗೆಬಗೆಯ ಪದ್ಧತಿಗಳು – ಇವೆಲ್ಲವೂ ದೇಶ–ಕಾಲಕ್ಕೆ ಅನುಗುಣವಾಗಿ ಬದಲಾಗುವಂತಹವು ಮತ್ತು ಇವು ಅನಿವಾರ್ಯಗಳೂ ಅಲ್ಲ. ಸಾಮಾಜಿಕ ಬದಲಾವಣೆಗೆ ಅನುಸಾರವಾಗಿ ಇವು ಬದಲಾಗುವುದು ಆವಶ್ಯಕ. ಇಲ್ಲದಿದ್ದರೆ ವ್ಯಕ್ತಿ ಜಡವಾಗುತ್ತಾನೆ, ಸಮಾಜವು ಬೆಳವಣಿಗೆ ಹೊಂದುವುದೇ ಇಲ್ಲ. ಅದು ನಿಂತ ನೀರಿನಂತಾಗಿ ಕಲುಷಿತವಾಗುತ್ತದೆ. ತ್ವರಿತಗತಿಯಲ್ಲಿ ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ದಿನದಿನವೂ ಹೊಸ ಹೊಸ ಮೌಲ್ಯಗಳು ಪ್ರಚಲಿತವಾಗುತ್ತವೆ, ಹಳೆಯ ಮೌಲ್ಯಗಳು ಸವಕಲಾಗುತ್ತ ಹೋಗುತ್ತವೆ. ಇದು ಸ್ವಾಭಾವಿಕ ಮತ್ತು ಪ್ರಗತಿಯ ಚಿಹ್ನೆಯೂ ಕೂಡ. ಹಿಂದಿನ ಜಾತಿನಿಯಮಗಳನ್ನು ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಅನುಸರಿಸಲಾಗುವುದಿಲ್ಲ. ಆದರೆ ಎಲ್ಲರನ್ನೂ ಸಮಾನವಾಗಿ ಪ್ರೀತಿಸಬೇಕು, ಗೌರವಿಸಬೇಕು ಎಂಬ ಮೌಲ್ಯವು ಸಾರ್ವತ್ರಿಕವೂ, ಸಾರ್ವಕಾಲಿಕವೂ ಆದುದು. ಸ್ತ್ರೀಯರಿಗೆ ಸಂಬಂಧಿಸಿದ ನಿಯಮಾವಳಿಗಳು ಹಿಂದಿನ ಕಾಲಕ್ಕೆ ಅನ್ವಯಿಸುತ್ತವೆ. ಅವನ್ನು ಈಗ ಅನುಸರಿಸಲಾಗುವುದಿಲ್ಲ. ಆದರೆ ಸ್ತ್ರೀತ್ವದ ಗುಣಗಳು, ಪಾವಿತ್ರ್ಯ ಮುಂತಾದವು ಸಾರ್ವತ್ರಿಕವೂ, ಸಾರ್ವಕಾಲಿಕವೂ ಆದವು. ಇವನ್ನು ಕಡೆಗಣಿಸಿದರೆ ಸಮಾಜ ಅವನತಿ ಹೊಂದುತ್ತದೆ. ಹಾಗೆಯೇ ಸ್ತ್ರೀಯರನ್ನು ಗೌರವಿಸುವುದೂ ಒಂದು ಉದಾತ್ತವಾದ ಮೌಲ್ಯ. ಇದನ್ನು ಕಡೆಗಣಿಸುವುದರಿಂದ ಸಮಾಜ ರೋಗಿಷ್ಠವಾಗುತ್ತದೆ. ಮೂಲಭೂತ ಮೌಲ್ಯಗಳು ಬದಲಾಗದೇ ಇದ್ದರೂ, ಅವನ್ನು ಅನ್ವಯಿಸುವ ವಿಧಾನಗಳು ಕಾಲಕಾಲಕ್ಕೆ ಬದಲಾಗಬಹುದು. ಚಿನ್ನ ಒಂದೇ ಆದರೂ, ಅದರಿಂದಾಗುವ ಆಭರಣಗಳಲ್ಲಿ ಹಲವಾರು ಬದಲಾವಣೆಗಳು ಆಗಬಹುದು. ಬಟ್ಟೆ ಒಂದೇ ಆದರೂ, ಅದನ್ನು ಬಳಸುವ ವಿಧಾನ ಕಾಲಕಾಲಕ್ಕೆ ಬದಲಾಗುತ್ತ ಹೋಗಬಹುದು. ಆಹಾರ, ಬಟ್ಟೆ, ವಸತಿ ಮುಂತಾದವಲ್ಲಿ ಅನೇಕ ಬದಲಾವಣೆಗಳು ಆಗಬಹುದು. ಆದರೆ ಅವುಗಳ ಮೌಲ್ಯ ಹಾಗೆಯೇ ಉಳಿಯುತ್ತದೆ. ಹಾಗೆಯೇ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳು ಕೂಡ ಶಾಶ್ವತವಾದವು. ಅವುಗಳ ಅನ್ವಯ ಕಾಲಾನುಕಾಲಕ್ಕೆ, ಪರಿಸ್ಥಿತಿಗೆ ಅನುಗುಣವಾಗಿ ಬದಲಾಗಬಹುದು. ನೈತಿಕತೆಯಲ್ಲಿ ಸದ್ಭಾವನೆಯೇ ಪರಮಶ್ರೇಷ್ಠ ಮೌಲ್ಯ. ಈ ಸದ್ಭಾವನೆ ಸಂದರ್ಭೋಚಿತವಾಗಿ ಬಗೆಬಗೆಯ ರೂಪದಲ್ಲಿ ವ್ಯಕ್ತವಾಗಬಹುದು. ಸಾಧನಾವಿಧಾನಗಳಲ್ಲಿ ಎಷ್ಟೇ ಬದಲಾವಣೆಗಳಿದ್ದರೂ 'ಮುಮುಕ್ಷುತ್ವ' ವೆಂಬ ಆಧ್ಯಾತ್ಮಿಕ ಮೌಲ್ಯ ಎಂದಿಗೂ ಬದಲಾಗದೇ ಉಳಿಯುತ್ತದೆ. ಆದ್ದರಿಂದ ನಿಜವಾಗಿಯೂ ಮೌಲ್ಯಗಳು ಬದಲಾಗುವುದಿಲ್ಲ, ಅವುಗಳ ಅನ್ವಯ ಬದಲಾಗುತ್ತದೆ. (ಬರಹ: ಸ್ವಾಮಿ ನಿತ್ಯಸ್ಥಾನಂದ)

# ಮಕ್ಕಳಲ್ಲಿ ಹೆಚ್ಚುತ್ತಿರುವ ಹಿಂಸೆ

ಅಜಯ್ ಆಚಾರ್ಯ

**ದೇ**ಶದಲ್ಲಿ ಎಲ್ಲೆಡೆಯೂ ವಿದ್ಯಾಶಾಲೆಗಳಿವೆ. ಒಂದಲ್ಲ ಒಂದು ಶಾಲೆಯಲ್ಲಿ ದುರ್ಘಟನೆಗಳು ನಡೆಯುತ್ತಿರುವುದೂ ಕೇಳಿಬರುತ್ತಲೇ ಇವೆ. ಅಮೆರಿಕಾ ಯುರೋಪು ದೇಶಗಳಂತೆ ಭಾರತದ ವಿದ್ಯಾರ್ಥಿವಿದ್ಯಾರ್ಥಿನಿಯರೂ ಮಾರಾಮಾರಿ, ಆತಂಕ, ಅಸಹನಶೀಲತೆಗೆ ಗುರಿಯಾಗುತ್ತಿದ್ದಾರೆ.

ಇದಕ್ಕೆ ಕಾರಣ ನಮ್ಮ ಬದಲಾಗುತ್ತಿರುವ ಜೀವನಶೈಲಿ ಮತ್ತು ಟಿ.ವಿ. ಹಾಗೂ ಸಿನೆಮಾಗಳಲ್ಲಿ ತೋರಿಸುತ್ತಿರುವ ಹಿಂಸಾಕೃತ್ಯಗಳನ್ನು ದಿನವಿಡೀ ನೋಡುತ್ತಿರುವುದು. ಇವು ಮಕ್ಕಳ ಕೋಮಲ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರಿ, ಮನಸ್ಸನ್ನು ಉದ್ರಿಕ್ತಗೊಳಿಸುತ್ತವೆ. ಇದರ ಪರಿಣಾಮವಾಗಿ, ಸ್ವಲ್ಪ ಅವಕಾಶ ಸಿಕ್ಕಿದರೂ ಸಾಕು, ಮನಸ್ಸಿನಲ್ಲಿ ಅಡಗಿರುವ ಭಾವನೆಗಳು ಸಿಡಿದೇಳುತ್ತವೆ. ಇದು ಆಶ್ಚರ್ಯವೆಂದೇನೂ ಅನಿಸುವುದಿಲ್ಲ. ಶಾಲೆ ಮತ್ತು ಮನೆಯೇ ಮಕ್ಕಳ ಪ್ರಪಂಚ. ಅವೇ ಅವರ ಮನೋಭಾವಗಳನ್ನು ಹೊರಗೆಡಹಲು ಸಿಗುವ ಸ್ವತಂತ್ರ ಸ್ಥಳಗಳು. ಮಕ್ಕಳು ಶಾಲೆ, ಮನೆ, ಸುತ್ತಲ ಪರಿಸರ, ಟಿ.ವಿ. ಹಾಗೂ ಸಿನೆಮಾ ಚಿತ್ರಗಳಲ್ಲಿ ಕಂಡದ್ದನ್ನು ಮಾತ್ರ ಅನುಸರಿಸಿ ತಮ್ಮ ನಡೆನುಡಿಗಳಲ್ಲಿ ವ್ಯಕ್ತ ಪಡಿಸುತ್ತಾರೆ. ಹೆಚ್ಚುತ್ತಿರುವ ಮಕ್ಕಳ ಹಿಂಸಾ ಪ್ರವೃತ್ತಿ ಮತ್ತು ಅಶ್ಲೀಲ ನಡತೆಗಳನ್ನು ಕಂಡು ಜವಾಬ್ದಾರಿಯುಳ್ಳ ಪ್ರತಿಯೊಬ್ಬ ನಾಗರಿಕನೂ ಚಿಂತಿಸಬೇಕು; ಆಧುನಿಕ ಪ್ರಗತಿಯ ಹೆಸರಿನಲ್ಲಿ, ನಾವು ನೈತಿಕ ಮೌಲ್ಯಗಳನ್ನು ಬಲಿಕೊಡುತ್ತಿದ್ದೇವೆ ಎನ್ನುವುದನ್ನು ಮನಗಾಣಬೇಕು.



ಕೆಲವು ವರ್ಷಗಳ ಹಿಂದೆ ಭಾರತದಲ್ಲಿ ವಿದ್ಯಾರ್ಥಿಜೀವನ ಸೌಮ್ಯವೂ, ಶಾಂತವೂ ಆಗಿತ್ತು. ದೇಶಕ್ಕೂ ಸಮಾಜಕ್ಕೂ ಹಿತವನ್ನು ಬಯಸುವ ರೀತಿಯಲ್ಲಿ ಸಾಗುತ್ತಿತ್ತು. ಆದರೆ, ಇಂದು ವಿದ್ಯಾರ್ಥಿಜೀವನ ಆತಂಕಕಾರಿಯಾಗಿ, ಬೇಗುದಿಗೆ ಬಿದ್ದಿದೆ. ಏಕೆ? ಆಧುನಿಕ ಬೆಡಗಿನ ಥಳುಕುಬೆಳಕಿನ ಜೀವನಶೈಲಿ ಹಾಗೂ ಇದ್ದಕ್ಕಿದ್ದಂತೆ ದೊಡ್ಡ ವ್ಯಕ್ತಿಯೆನಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ. ಇವುಗಳಿಂದ ಸರಳ ಜೀವನಶೈಲಿ ಮಾಯವಾಗುತ್ತಿದೆ. ಇದಕ್ಕೆ ಪರಿಹಾರ ವಿದ್ಯಾರ್ಥಿಗಳ ಸ್ವಚ್ಛಂದ ಪ್ರವೃತ್ತಿಯನ್ನು ತಡೆಗಟ್ಟುವ ಮಾರ್ಗವನ್ನು ಕಂಡುಹಿಡಿಯುವುದು. ಆ ಮೂಲಕ ಮಾತ್ರವೇ ಅಳಿಯುತ್ತಿರುವ ನಮ್ಮ ಸಂಸ್ಕೃತಿಯನ್ನು ಉಳಿಸಬಹುದು.

ಬಾಲ್ಯದಲ್ಲಿಯೇ ಯಾರನ್ನೂ ಉತ್ತಮ ವ್ಯಕ್ತಿಯೆಂದಾಗಲಿ, ಕಳಪೆಯವನೆಂದಾಗಲಿ ಪರಿಗಣಿಸಲು ಆಗುವುದಿಲ್ಲ. ತಾಯಿ–ತಂದೆಯರ ಶಿಕ್ಷಣದ ತಳಹದಿಯ ಮೇಲೆಯೇ ಮಗುವಿನ ಉತ್ತಮ ಅಥವಾ ಕಳಪೆಯ ಜೀವನಸೌಧ ಕಟ್ಟಲ್ಪಡುತ್ತದೆ. ಸುಶಿಕ್ಷಿತ ಪೋಷಕರ ಸಹವಾಸದಲ್ಲಿ ಬೆಳೆದ ಬಾಲಕ/ಬಾಲಕಿಯರು ಸಮಾಜದಲ್ಲಿ ಸಜ್ಜನರಾಗಿ ಬೆಳೆಯುತ್ತಾರೆ; ಸಮಾಜದ ಹಿತೈಷಿಗಳೂ ಆಗುತ್ತಾರೆ. ಸರಿಯಾದ ಶಿಕ್ಷಣವಿಲ್ಲದಿದ್ದರೆ ಕಾಡಿನ ಮುಳ್ಳು ಪೊದೆ ಯಂತೆ ಸ್ವೇಚ್ಛೆಯಾಗಿ ಬೆಳೆದು ಸಮಾಜಕಂಟಕರಾಗುತ್ತಾರೆ. ಹಾಗಾದಾಗ ಯಾರನ್ನು ತಾನೇ ದೂಷಿಸಬೇಕು?

ಮಕ್ಕಳಿಗೆ ಹೊಡೆದಾಟ–ಬಡಿದಾಟ ಕಂಡರೆ ಇಷ್ಟ. ಸಹಜವಾಗಿ ಯುದ್ಧದ ಅಥವಾ ಸಾಹಸದ ಕತೆಗೇ ಅವರ ಒಲವು. ಅದರಲ್ಲೂ ವಿಶೇಷವಾಗಿ, ನಾಯಕ ಎದುರಾಳಿಯ ಮೇಲೆ ನಡೆಸುವ ದಾಳಿಯನ್ನು ಮೆಚ್ಚುತ್ತಾರೆ. ಅವರ ಹಾವ ಭಾವಗಳನ್ನೇ ಅನುಕರಿಸುತ್ತಾರೆ.

ಬದುಕಿನಲ್ಲಿ ನಮ್ಮ ನಿರೀಕ್ಷೆಗಿಂತ ಹೆಚ್ಚಾಗಿ ಹಿಂಸೆಯ ಪ್ರವೃತ್ತಿ ತನ್ನ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ನಾವು ಹೇಳಿದ ಮಾತು ಕೂಡಲೇ ಜಾರಿಗೆ ಬರಬೇಕು. ಸ್ವಲ್ಪ ತಡವಾದರೂ ನಮ್ಮ ಮುಖ ಗಂಟಿಕ್ಕಿ, ಕ್ರೌರ್ಯಭಾವವನ್ನು ಹೊರಗೆಡಹುತ್ತದೆ. ನಮ್ಮ ಮಾತು ನಡೆಯದಿರಲು ಕಾರಣವೇನೆಂದು ಗಮನಿಸುವಷ್ಟೂ ನಮಗೆ ತಾಳ್ಮೆ ಇರುವುದಿಲ್ಲ. ದಾರಿಯಲ್ಲಿ ಹೋಗುತ್ತಿರುವಾಗ ಜನಸಂದಣಿಯ ಕಾರಣದಿಂದ, ಸಲೀಸಾಗಿ ಮುಂದೆ ಹೋಗಲು ಅಡ್ಡಿಯಾಗಬಹುದು ಅಥವಾ ಯಾವುದಾದರೂ ವಾಹನ ಅಡ್ಡ ಬರಬಹುದು. ಅಷ್ಟಕ್ಕೇ ನಮ್ಮ ಸಹನೆ ಹಾರಿಹೋಗಿಬಿಡುತ್ತದೆ. ಆಗ ಸಂಚಾರನಿಯಂತ್ರಣಕ್ಕೆ ನಿಂತಿರುವ ಪೊಲೀಸಿನವರ ಮೇಲೆ ನಮ್ಮ ಕೋಪವನ್ನು ತೋರಿಸುತ್ತೇವೆ.

ಮಕ್ಕಳು ಯಾವಾಗಲೂ ತಮ್ಮ ಸುತ್ತಮುತ್ತಲಿರುವ ಜನರ ಚಲನವಲನಗಳನ್ನೇ ಗಮನವಿಟ್ಟು ನೋಡುತ್ತಿರುತ್ತಾರೆ. ಅದನ್ನು ಗ್ರಹಿಸುತ್ತಾರೆ. ಅದರ ಅನುಕರಣೆಯನ್ನೂ ಮಾಡುತ್ತಾರೆ. ದುರದೃಷ್ಟ ವಶಾತ್ ಪೋಷಕರು ಹಿಂಸಾಪ್ರವೃತ್ತಿಯುಳ್ಳವರಾಗಿದ್ದರೆ, ಮಕ್ಕಳು ಅದನ್ನೇ ಆದರ್ಶವೆಂದು ತಿಳಿದು ಅವರನ್ನು ಅನುಸರಿಸುತ್ತಾರೆ. ಅಷ್ಟೇ ಅಲ್ಲ, ಪೋಷಕರನ್ನು ಅನುಸರಿಸುವುದೇ ಶ್ರೇಷ್ಠವೆಂದು ತಿಳಿಯುತ್ತಾರೆ. ಅದರಲ್ಲೇ ತಮ್ಮ ದೊಡ್ಡಸ್ತಿಕೆ ಮೆರೆಯುತ್ತಾರೆ.